ಓ. ಎಸ್. ಸಂಖ್ಯೆ : 52–2012
ಪಿ . ಡಬ್ಲ್ಯೂ. : 1

<u>ಸಾಕ್ಷಿಯನ್ನು ದಿನಾಂಕ : 09–11–2022 ರಂದು ಕರೆಯಿಸಿ ಪ್ರಮಾಣ ವಚನ ಭೋಧಿಸಲಾಯಿತು.</u>

<u>ಮುಂದುವರೆದ ಪಾಟೀ ಸವಾಲು ಪ್ರತಿವಾದಿ 11 ಪರ ಶ್ರೀ ಜಿ ಆರ ವಕೀಲರಿಂದಃ</u>

1. ಬಂಡೆಪ್ಪ ನನಗೆ ಅಜ್ಜನಾಗಬೇಕು. ಬಂಡೆಪ್ಪರವರಿಗೆ 3 ಜನ ಗಂಡು ಮಕ್ಕಳು ಮತ್ತು ಇಬ್ಬರೂ ಹೆಣ್ಣು ಮಕ್ಕಳು ಇರುತ್ತಾರೆ ಅವರ ಎಲ್ಲರೂ ತೀರಿಕೊಂಡಿರುತ್ತಾರೆ. ಬಂಡೆಪ್ಪನ ಹೆಣ್ಣು ಮಕ್ಕಳಾದ ಗಂಗಮ್ಮಾ ಕಲ್ಲಮ್ಮಾ ಇವರನ್ನು ಪಾರ್ಟಿ ಮಾಡಿರಲಿಲ್ಲಾ ಅಂದರೆ ಸರಿ. ಗಂಗಮ್ಮಾರಿಗೆ ಶಂಕರ, ಶಿರೋಮಣಿ, ಪಂಡಿತ, ಜಯೇಮ್ಮಾ ಗುಂಡಮ್ಮಾ ಹಾಗೂ ಶೆರಣೆಮ್ಮಾ ಮಕ್ಕಳು ಇರುತ್ತಾರೆ ಅಂದರೆ ಸರಿ. ಪಂಡಿತರಿಗೆ 4 ಜನ ಮಕ್ಕಳು ಇರುವ ಬಗ್ಗೆ ನನಗೆ ಗೊತ್ತಿಲ್ಲಾ. ಸಾಮಸನ ಪಂಡಿತರ ಮಗನಾಗಿರುವ ಬಗ್ಗೆ ನನಗೆ ಗೊತ್ತಿಲ್ಲಾ. ದಾವಾ ಆಸ್ತಿ ಬಂಡೆಪ್ಪರವರ ಅಸ್ತಿ ಅಂದರೆ ಸರಿ. ಪಂಡಿತನ ಮಕ್ಕಳಿಗೆ ಮೋಸ ಮಾಡುವ ಉದ್ದೇಶದಿಂದ ಅವರನ್ನು ಈ ದಾವೆಯಲ್ಲಿ ಪಾರ್ಟಿ ಮಾಡಿರಲಿಲ್ಲಾ ಅಂದರೆ ಸರಿಯಲ್ಲ. ಬಂಡೆಪ್ಪರವರಿಗೆ ಎರಡು ಮನೆಗಳು ಇದ್ದು ಅವುಗಳ ನಂ ಸಿ ಎಂ ಸಿ ನಂ 10–3–23, 10–3–18 ಇರುತ್ತವೆ ಅಂದರೆ ಸರಿ. ಸದರಿ ಅಸ್ತಿಗಳನ್ನು ಈ ದಾವೆಯಲ್ಲಿ ಸೇರಿಸಿಲ್ಲಾ ಅಂದರೆ ಸರಿ. ದಾವಾ ಅಸ್ತಿಯಲ್ಲಿ 5 ಎಕರೆ 30 ಗುಂಟೆ ಜಮೀನು ಸರಕಾರದವರು ವಶಪಡಿಸಿಕೊಂಡಿದ್ದಾರೆ ಅಂದರೆ ಸರಿ. ಸದರಿ ಪ್ರಕರಣದಲ್ಲಿ ಪರಿಹಾರ ನೀಡಿದ್ದು ಹೆಚ್ಚಿಗೆ ಪರಿಹಾರ ಬೇಕು ಎಂದು ಗೌರವಾನ್ವಿತ ಕರ್ನಾಟಕ ಉಚ್ಚ ನ್ಯಾಯಾಲಯ ಕಲಬುರಗಿಯಲ್ಲಿ ಎಂ ಫ, ಎ ನಂ. 201698/2016 ರಲ್ಲಿ ಮೆಲ್ಮನವಿ ಹಾಕಿದ್ದೆವೆ ಅಂದರೆ ಸರಿ. ಸದರಿ ಪರಿಹಾರದಲ್ಲಿ ಕೂಡ ಗಂಗಮ್ಮಾ , ಕಲ್ಲಮ್ಮಾ ಇವರ ಮಕ್ಕಳಿಗೆ ಕೂಡ ಪರಿಹಾರದಲ್ಲಿ ಭಾಗ ಇದೆ ಅಂದರೆ ಸರಿಯಲ್ಲ. ಸರ್ವೆ ನಂ 88/1 ಬಂಡೆಪ್ಪರವರ ಹೆಸರಿನಲ್ಲಿ ಇತ್ತು ಅಂದರೆ ಸರಿ. ಸಾಕ್ಷಿ ಮುಂದುವರೆದು ಸದರಿ ಅಸ್ತಿ ನನ್ನ ತಂದೆ ಮತ್ತು ಗಣಪತರಾವ ಮಾರಾಟ ಮಾಡಿರುತ್ತಾರೆ ಎಂದು ಹೇಳುತ್ತಾರೆ. ಸದರಿ ಕ್ರಯಾ ಪತ್ರವನ್ನು ನಾನು ಈ ದಾವೆಯಲ್ಲಿ ಪ್ರಶ್ನೆ ಮಾಡಿಲ್ಲಾ. ನಾನು ಖರೀದಿ ಮಾಡಿದವರ ಜೊತೆ ಸೇರಿ ಕ್ರಯಾ

ಪತ್ರಗಳನ್ನು ಸೃಷ್ಟಿ ಮಾಡಿರುತ್ತೇವೆ ಅಂದರೆ ಸರಿಯಲ್ಲ. ನಾನು ಪ್ರತಿವಾದಿ 1 ರಿಂದ 6 ಇವರ ಜೊತೆ ಸೇರಿಕೊಂಡು ಉಳಿದ ಪ್ರತಿವಾದಿಗೆ ಮೋಸ ಮಾಡುವ ಉದ್ದೇಶದಿಂದ ಈ ದಾವೆ ಹಾಕಿರುತ್ತೇನೆ ಅಂದರೆ ಸರಿಯಲ್ಲ. 11 ನೇ ಪ್ರತಿವಾದಿ ಪತ್ರ ವಾದ ಪತ್ರ ಹಾಕಿದ್ದ ಬಗ್ಗೆ ನನಗೆ ಗೊತ್ತಿದೆ. ಬಂಡೆಪ್ಪರವರ 27 ಜನ ವಾರಸುದಾರರನ್ನು ಈ ದಾವೆಯಲ್ಲಿ ಪಾರ್ಟಿಯನ್ನಾಗಿ ಮಾಡಿಲ್ಲಾ 11 ನೇ ಪ್ರತಿವಾದಿ ತಮ್ಮ ಪ್ರತಿವಾದ ಪತ್ರದ 19 ನೇ ಪ್ಯಾರಾದಲ್ಲಿ ಹೇಳಿರುತ್ತಾರೆ ಅಂದರೆ ಸರಿ. ಅವರನ್ನು ಪಾರ್ಟಿಯನ್ನಾಗಿ ಮಾಡಿದರೆ ನಮಗೆ ಕಡಿಮೆ ಭಾಗ ಬರುತ್ತದೆ ಎಂದು ಅವರನ್ನು ಪಾರ್ಟಿಯನ್ನಾಗಿ ಮಾಡಿಲ್ಲಾ ಅಂದರೆ ಸರಿಯಲ್ಲ. ಬಂಡೆಪ್ಪರವರ ಮಕ್ಕಳಲ್ಲಿ ವಿಭಾಗ ಆಗಿಲ್ಲಾ ಅಂದರೆ ಸರಿ. ದಾವಾ ಅಸ್ತಿಗಳಲ್ಲಿ ಮತ್ತು ಬೇರೆ ದಾವಾ ಅಸ್ತಿಗಳಲ್ಲಿ 11 ನೇ ಪ್ರತಿವಾದಿಗೆ ಹಕ್ಕು ಇದೆ ಅಂದರೆ ಸರಿಯಲ್ಲ. ನಾನು ಉದ್ದೇಶ ಪೂರ್ವಕವಾಗಿ ಮನೆ ಮತ್ತು ಬೇರೆ ಅಸ್ತಿಗಳನ್ನು ಈ ದಾವೆಯಲ್ಲಿ ಸೇರಿಸಿಲ್ಲಾ ಅಂದರೆ ಸರಿಯಲ್ಲ. ನನಗೆ ಎಲ್ಲಾ ಮಾಹಿತಿ ಗೊತ್ತಿದ್ದರು ಕೂಡಾ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಅಂದರೆ ಸರಿಯಲ್ಲ.

ಮರು ವಿಚಾರಣೆ ಇಲ್ಲ.

(ನನ್ನ ಉಕ್ತ ಲೇಖನದ ಪ್ರಕಾರ ತೆರೆದ ನ್ಯಾಯಾಲಯದಲ್ಲಿ ಕಂಪ್ಯೂಟರ್ ಮೇಲೆ ಬೆರಳಚ್ಚು ಮಾಡಲಾಗಿದೆ.)

ಓ.ಹೇ.ಕೇ. ಸರಿ ಇದೆ.

ಪ್ರ.ಹಿ ಸಿವಿಲ್ ಜಡ್ಜ & ಸಿ. ಜೆ.ಎಮ್
ನ್ಯಾಯಾಧೀಶರು, ಬೀದರ್.